# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅರಣ್ಯ ಇಲಾಖೆಯಲ್ಲಿನ ವನಪಾಲಕ ವೃಂದದ ಹುದ್ದೆಯನ್ನು ಉಪ ವಲಯ ಅರಣ್ಯ ಅಧಿಕಾರಿ ಎಂದು ಪುನರ್ ಪದನಾಮೀಕರಿಸುವ ಕುರಿತು

ಓದಲಾಗಿದೆ: 1)ಸರ್ಕಾರದ ಆದೇಶ ಸಂಖ್ಯೆ ಅಪಜೀ 366 ಅಅಸೇ 2010, ದಿನಾಂಕ 20/11/2010.

2)ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ: 11/07/2011 ರಂದು ಜರುಗಿದ ವೃಂದ ಪರಿಶೀಲನಾ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ವನಪಾಲಕರ ಸಂಘವು ವನಪಾಲಕ ವೃಂದವನ್ನು ಉಪ ವಲಯ ಅರಣ್ಯ ಅಧಿಕಾರಿಯೆಂದು ಪುನರ್ ಪದನಾಮೀಕರಿಸುವ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿತು. ಈ ವಿಷಯವನ್ನು ಹಾಗೂ ಅರಣ್ಯ ಇಲಾಖೆಯ ಇತರೆ ಸಂಘಗಳ ಬೇಡಿಕೆಗಳನ್ನು ಮತ್ತು ಅರಣ್ಯ ಶಾಸ್ತ್ರ ಪದವೀಧರರ ಬೇಡಿಕೆಯನ್ನು ಪರಿಗಣಿಸುವ ಕುರಿತು ಪರಿಶೀಲಿಸಲು ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ದಿನಾಂಕ 20/11/2010 ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಇಡೀ ವಿಷಯವನ್ನು ಪರಿಶೀಲಿಸಿ ಸಲ್ಲಿಸಿದಂತಹ ಶಿಫಾರಸ್ಸುಗಳ ಪೈಕಿ ವನಪಾಲಕ ವೃಂದದ ಹುದ್ದೆಯ ಪದನಾಮವನ್ನು ಪುನರ್ ಪದನಾಮೀಕರಿಸುವ ಬಗ್ಗೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಿತು.

ವನಪಾಲಕ ವೃಂದದ ಪದನಾಮವನ್ನು ಉಪ ವಲಯ ಅರಣ್ಯ ಅಧಿಕಾರಿ (Deputy Range Forest Officer) ಎಂದು ಪುನರ್ ಪದನಾಮೀಕರಿಸಿ, ಪ್ರಸ್ತುತ ಈ ಹುದ್ದೆಯ ನೇರ ನೇಮಕಾತಿಗೆ ನಿಗಧಿಪಡಿಸಿರುವ ದ್ವಿತೀಯ ಪಿಯುಸಿ (ವಿಜ್ಞಾನ) ವಿದ್ಯಾರ್ಹತೆಯನ್ನು ಬದಲಾಯಿಸಿ, ಸದರಿ ಹುದ್ದೆಯ ನೇರ ನೇಮಕಾತಿಗೆ BSc. (Forestry) ಪದವಿ ಸೇರಿದಂತೆ ವಿಜ್ಞಾನ ಪದವಿಯ ವಿದ್ಯಾರ್ಹತೆಯನ್ನು ನಿಗಧಿಪಡಿಸಿ ನೇರ ನೇಮಕಾತಿಗೆ ಶೇಕಡ 70 ರಷ್ಟು ಹುದ್ದೆಗಳನ್ನು BSc. (Forestry) ಪದವೀಧರರಿಗೆ ಮೀಸಲಿಡಲು ಹಾಗೂ ಇನ್ನುಳಿದ 30 ರಷ್ಟು ಹುದ್ದೆಗಳನ್ನು ವಿಜ್ಞಾನ ಪದವೀಧರರಿಂದ ಮೀಸಲಿಡಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಹಾಗೂ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದಂತೆ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯ ಬಗ್ಗೆ ವೃಂದ ಪರಿಶೀಲನಾ ಸಮಿತಿಯು ದಿನಾಂಕ 11/07/2011 ರಂದು ಜರುಗಿದ ಸಭೆಯಲ್ಲಿ ಇತರೆ ವಿಷಯಗಳೊಂದಿಗೆ ವನಪಾಲಕರ ವೃಂದದ ಹುದ್ದೆಯನ್ನು ಉಪ ವಲಯ ಅರಣ್ಯ ಅಧಿಕಾರಿಯಾಗಿ ಎಂದು ಪುನರ್ ಪದನಾಮೀಕರಿಸಲು ತೀರ್ಮಾನಿಸಿರುತ್ತದೆ. ಆದುದರಿಂದ, ಈ ಹಿನ್ನೆಲೆಯಲ್ಲಿ ಅರಣ್ಯ

-2-

ಇಲಾಖೆಯಲ್ಲಿನ ವನಪಾಲಕರ ಹುದ್ದೆಯನ್ನು ಇನ್ನು ಮುಂದೆ ಉಪ ವಲಯ ಅರಣ್ಯ ಅಧಿಕಾರಿ ಎಂದು ಪದನಾಮೀಕರಿ ಆದೇಶ ಹೊರಡಿಸಲು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಅಪಜೀ 141 ಅಅಸೇ 2010**
**ಬೆಂಗಳೂರು, ದಿನಾಂಕ 14/09/2011**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಸನ್ನಿವೇಶಗಳಿಂದಾಗಿ ಅರಣ್ಯ ಇಲಾಖೆಯಲ್ಲಿನ ರೂ.6250-125-6500-150-7100-175-7800-200-8600-225-9500-250-10500-300-12000 ವೇತನ ಶ್ರೇಣಿಯನ್ನು ಹೊಂದಿರುವ ವನಪಾಲಕರ ಹುದ್ದೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಉಪ ವಲಯ ಅರಣ್ಯ ಅಧಿಕಾರಿಯೆಂದು ಪುನರ್ ಪದನಾಮೀಕರಿಸಿದೆ. ಈ ಸಂಬಂಧ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾಳಿಗಳಲ್ಲಿ ವನಪಾಲಕ ಹುದ್ದೆಗೆ ಅನ್ವಯಿಸುವಂತೆ, ಸೂಕ್ತ ತಿದ್ದುಪಡಿ ತರಲು ಪ್ರತ್ಯೇಕ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಬಾಲಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಸೇವೆಗಳು)
14/9/2011

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)/(ಲೆಕ್ಕಪತ್ರ)/ (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
3) ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
4) ಸರ್ಕಾರದ ಅಪರ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು-1), ಬಹುಮಹಡಿ ಕಟ್ಟಡ, ಬೆಂಗಳೂರು
6) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಸೇವಾ ನಿಯಮ), ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
8) ಸರ್ಕಾರದ ಕಾರ್ಯದರ್ಶಿ (ಅರಣ್ಯ)ರವರ ಪತ್ರಾಂಕಿತ ಸಹಾಯಕರು
9) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು

(7–9: ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ)

10) ಶಾಖಾ ರಕ್ಷಕ ಕಡತ